## ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾದಂ, ಹಿರಿಯೂರು

ಸಿ.ಸಿ.ನಂ.542/2023

ಪಿರ್ಯಾದಿ : ಹಿರಿಯೂರು ಗ್ರಾಮಾಂತರ ಪೋಲೀಸ್ ಠಾಣೆ

ವಿರುದ್ಧ

ಆರೋಪಿತರು : ದೇವರಾಜ
ತಂದೆ ಜಯಣ್ಣ, 25 ವರ್ಷ
ಕೆಎ.17.ಎಸ್.9989 ರ ಮೋಟಾರ್ ಸೈಕಲ್ ಸವಾರ ,
ವಾಸಃ ಗಾಂಧಿನಗರ, ಚಿತ್ರದುರ್ಗ ಟೌನ್

### ಆರೋಪಣಾ ಸಾರಾಂಶ

ದಿನಾಂಕ 09.02.2023 ರಂದು ಸಂಜೆ 4.15 ರ ಸಮಯದಲ್ಲಿ ಹಿರಿಯೂರು ತಾಲ್ಲೂಕು ವಿ ವಿ ಪುರ ಗ್ರಾಮದ ಬಿ ಎಸ್ ಎನ್ ಎಲ್ ಟೆಲಿಫೋನ್ ಮುಂದಿನ ಹೊಸದುರ್ಗ-ಹಿರಿಯೂರಿನ ರಸ್ತೆಯಲ್ಲಿ ಶ್ರೀಧರ ತಂದೆ ಪಾಂಡುರಂಗಪ್ಪ ರವರು ವಿವಿ ಪುರ ಡ್ಯಾಂ ಕಡೆಯಿಂದ ಹಿರಿಯೂರು ಕಡೆಗೆ ನಂ ಕೆಎ.16.ಈಪಿ.4245 ನೇ ಮೋಟಾರ್ ಸೈಕಲ್ ನಲ್ಲಿ ಬರುತ್ತಿದ್ದಾಗ ಆತನ ಮುಂದೆ ಬರುತ್ತಿದ್ದ ಯಾವುದೋ ಒಂದು ಕಾರು ಬ್ರೇಕ್ ಹಾಕಿದ್ದರಿಂದ ಶ್ರೀಧರನು ಸಹ ಮೋಟಾರ್ ಸೈಕಲ್ ನ ಬ್ರೇಕ್ ಹಾಕಿದ ಪರಿಣಾಮ ಹಿಡಿತ ತಪ್ಪಿ ರಸ್ತೆಯ ಮೇಲೆ ಬಿದ್ದಿದ್ದು ಅದೇ ಸಮಯಕ್ಕೆ ಆರೋಪಿಯಾದ ನೀವು ಕೆಎ.17.ಎಸ್.9989 ರ ಮೋಟಾರ್ ಸೈಕಲ್ ನ್ನು ಮನುಷ್ಯನ ಪ್ರಾಣಕ್ಕೆ ಅಪಾಯವುಂಟಾಗುವಂತೆ ಅತಿವೇಗವಾಗಿ ಮತ್ತು ಅಜಾಗರೂಕತೆಯಿಂದ ಚಲಿಸಿಕೊಂಡು ಬಂದು ಅಪಘಾತ ಪಡಿಸಿದ್ದು ಈ ಪ್ರಕಾರ ನೀವು ಭಾರತೀಯ ದಂಡ ಸಂಹಿತೆ ಕಲಂ 279 ರಡಿಯಲ್ಲಿ ದಂಡನೀಯವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನವನ್ನು ಬರುವಂತೆ ಎಸಗಿರುತ್ತೀರಿ.

ಎಡರನೆಯದಾಗಿ ಅದೇ ದಿನ, ಅದೇ ಸ್ಥಳ, ಅದೇ ಸಮಯದಲ್ಲಿ ಆರೋಪಿಯಾದ ನೀವು ನಿಮ್ಮ ಮೋಟಾರ್ ಸೈಕಲ್ ನ್ನು ಅತಿವೇಗ ಮತ್ತು ನಿರ್ಲಕ್ಷತನದಿಂದ

ಚಾಲಾಯಿಸಿಕೊಂಡು ಬಂದು ರಸ್ತೆಯಲ್ಲಿ ಬಿದ್ದಿದ್ದ ಶ್ರೀಧರನಿಗೆ ಡಿಕ್ಕಿ ಪಡಿಸಿದ ಪರಿಣಾಮ ಅವರ ತಲೆಗೆ, ಕೈಕಾಲುಗಳಿಗೆ ಬಲವಾದ ಪೆಟ್ಟುಗಳು ಬಿದ್ದು ರಕ್ತಗಾಯಗಳಾಗಿದ್ದು, ಸಂಜೆ 4.50 ರ ಸಮಯದಲ್ಲಿ ಹಿರಿಯೂರು ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಬರುವಷ್ಟರಲ್ಲಿ ಮೃತಪಟ್ಟಿದ್ದು ಈ ಪ್ರಕಾರ ನೀವು ಭಾರತೀಯ ದಂಡ ಸಂಹಿತೆ ಕಲಂ 304(ಎ) ರಡಿಯಲ್ಲಿ ದಂಡನೀಯವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನವನ್ನು ಬರುವಂತೆ ಎಸಗಿರುತ್ತೀರಿ.

ಕೊನೆಯದಾಗಿ ಅದೇ ದಿನ, ಅದೇ ಸ್ಥಳ, ಅದೇ ಸಮಯದಲ್ಲಿ ಆರೋಪಿಯಾದ ನೀವು ವಿಮಾ ಇಲ್ಲದ ನಿಮ್ಮ ಮಾಲೀಕತ್ವದ ಕೆಎ.17.ಎಸ್.9989 ರ ಮೋಟಾರ್ ಸೈಕಲ್ ನ್ನು ಅತಿವೇಗ ವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿದ್ದು ಈ ಪ್ರಕಾರ ನೀವು ಭಾರತೀಯ ಮೋಟಾರು ವಾಹನ ಕಾಯ್ದೆ ಕಲಂ 146 ರೆ/ವಿ 196 ರಡಿಯಲ್ಲಿ ದಂಡನೀಯವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನವನ್ನು ಬರುವಂತೆ ಎಸಗಿರುತ್ತೀರಿ.

ಪ್ರ 1. ನಿಮಗೆ ಓದಿ ಹೇಳಿ ಕೇಳಿದ ಆಪಾದನೆ ತಿಳಿಯಿತೇ ?

ಉತ್ತರಃ

ಪ್ರ 2. ನೀವು ಆಪಾದನೆಯನ್ನು ಒಪ್ಪಿಕೊಳ್ಳುತ್ತೀರಾ ಅಥವಾ ವಿಚಾರಣೆಯಾಗಬೇಕಾ ?

ಉತ್ತರಃ

(ಮೇಲ್ಕಂಡ ಆಪಾದನೆಯನ್ನು ಆರೋಪಿಗೆ ಓದಿ ಹೇಳಿ ಅವರು ಕೊಟ್ಟ ಉತ್ತರವನ್ನು ಯಥವತ್ತಾಗಿ ದಾಖಲಾಗಿದೆ ಎಂದು ಈ ಮೂಲಕ ಧೃಡೀಕರಿಸಲಾಗಿದೆ)

ದಿನಾಂಕಃ **22.07.2024**
ಸ್ಥಳಃ ಹಿರಿಯೂರು

(ಶ್ರೀಮತಿ ಸುಜಾತ ಸುವರ್ಣ.ಬಿ)
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ ಎಂ ಎಫ್ ಸಿ, ಹಿರಿಯೂರು